

# ಕೋಮಲವಲ್ಲಿಯ ಕನಸುಗಳು...!



ತಾಯಿ ಸಂಧ್ಯಾ ಜತೆ

(39ನೇ ಪುಟದಿಂದ)
ಸಹಾಯಾರ್ಥ ಪ್ರದರ್ಶನಗಳಿಗೂ ಅವರು ದಕ್ಷಿಣ ಭಾರತವೆಲ್ಲ ಹೋಗಿಬರುತ್ತಿದ್ದರು. ಅಂತಹ ನೃತ್ಯ ಪ್ರದರ್ಶನದಲ್ಲಿ ಒಮ್ಮೆ ಮುಖ್ಯ ಅತಿಥಿಯಾಗಿದ್ದ ಹೆಸರಾಂತ ನಟ ಶಿವಾಜಿ ಗಣೇಶನ್ ಜಯಲಲಿತಾ ಪ್ರತಿಭೆಯನ್ನು ಗುರುತಿಸಿದ್ದರು.

ಈ ನಡುವೆ ಕಲ್ಯಾಣ್ ಕುಮಾರ್ ಅವರೊಂದಿಗೆ ಮನೆ ಅಳಿಯ, ಮಾವನ ಮಗಳು, ಬದುಕುವ ದಾರಿ, ನನ್ನ ಕರ್ತವ್ಯ ಮುಂತಾದ ಚಿತ್ರಗಳಲ್ಲಿ ಜಯಲಲಿತಾ ಅಭಿನಯಿಸಿದ್ದರು. ಆಗ ತಮಿಳು ಚಿತ್ರಗಳಲ್ಲಿ ಎಂ.ಜಿ.ಆರ್– ಬಿ. ಸರೋಜಾದೇವಿ ಜೋಡಿ ಬಹು ಜನಪ್ರಿಯ. ತಮಿಳಿನಲ್ಲಿ ಜಯಲಲಿತಾ ಕಾಣಿಸಿಕೊಂಡ ಮೊದಲ ಚಿತ್ರ 'ವೆನ್ನಿರ ಅಡೈ'. ಲಂಗ – ಜಂಪರ್ ಉಡುಪು ಧರಿಸಿ ತಾಯಿ ಸಂಧ್ಯಾ– ಚಿಕ್ಕಮ್ಮ ವಿದ್ಯಾವತಿ ಜೊತೆ ಶೂಟಿಂಗ್, ಕಾರ್ಯಕ್ರಮಗಳಿಗೆ ಬರುತ್ತಿದ್ದ ಜಯಲಲಿತಾ ಅವರು ಸೀರೆ–ರವಿಕೆ ಧರಿಸಿದ್ದ 'ವೆನ್ನಿರ ಅಡೈ' ಆಗ ಜೋರು ಸುದ್ದಿ ಮಾಡಿತ್ತು.

ಚೊಚ್ಚಲ ಚಿತ್ರದಿಂದಲೇ ತಮಿಳು ಚಿತ್ರಾಭಿಮಾನಿಗಳ ಗಮನ ಸೆಳೆದಿದ್ದ ಜಯಲಲಿತಾ ಆ ಕಾಲದ 'ಸೂಪರ್ ಸ್ಟಾರ್' ಎಂ.ಜಿ. ರಾಮಚಂದ್ರನ್ ಕಣ್ಣಿಗೆ ಬೀಳುವುದು ತಡವಾಗಲಿಲ್ಲ. ದ್ರಾವಿಡ ಚಳವಳಿಯ ನೇತಾರರೂ ಆಗಿದ್ದ ಎಂ.ಜಿ.ಆರ್. ಚಿತ್ರಗಳಿಗಾಗಿ ನೋಡುಗರು ಕಾಯುತ್ತಿದ್ದ ಕಾಲ ಅದು. ಎಂ.ಜಿ.ಆರ್. ಜೊತೆ ಜಯಲಲಿತಾ ಜೋಡಿಯಾದ ಪ್ರಥಮ ಚಿತ್ರ 'ಆಯಿರತಿಲ್ ಒರುವನ್'. ಹಳೇ ಹೀರೋ– ಹೊಸ ಹಿರೋಯಿನ್ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಗೆದ್ದಿದ್ದೇ ತಡ ನಿರ್ಮಾಪಕರು ಜಯಲಲಿತಾ ಕಾಲ್‌ಶೀಟ್‌ಗಾಗಿ ಎಡತಾಕತೊಡಗಿದರು.

ತಮಿಳು ಚಿತ್ರರಂಗಕ್ಕೆ ಪದಾರ್ಪಣೆ ಮಾಡುವ ಮೊದಲು ನೃತ್ಯ ಕಾರ್ಯಕ್ರಮಗಳನ್ನು ನೀಡುತ್ತಿದ್ದ ಜಯಲಲಿತಾ ರಂಗಭೂಮಿಗೂ ಕಾಲಿಟ್ಟಿದ್ದರು. ಸಂಧ್ಯಾ – ಪಾರ್ಥಸಾರಥಿ ಮುಖ್ಯ ಭೂಮಿಕೆಯಲ್ಲಿದ್ದ 'ಅಂಡರ್ ಸೆಕ್ರೆಟರಿ' ನಾಟಕದಲ್ಲಿ ಜಯಲಲಿತಾ ಸೇಲ್ಸ್‌ಗರ್ಲ್ಸ್ ಪಾತ್ರ ವಹಿಸಿದ್ದರು. ಇವರಿಗೆ ಜೋಡಿಯಾಗಿದ್ದವರು 'ತುಘಲಕ್' ಪತ್ರಿಕೆಯ ಸಂಪಾದಕ, ರಂಗಭೂಮಿ–ಚಿತ್ರ ನಟ ಚೋ. ರಾಮಸ್ವಾಮಿ.

1964ನೇ ವರ್ಷ ಜಯಲಲಿತಾ ಪಾಲಿಗೆ ಬಹುಮುಖ್ಯವಾದುದು. ಬಣ್ಣದ ಬದುಕಿಗೆ ಹೆಜ್ಜೆಗಳಿಟ್ಟ ವರ್ಷ ಅದು. ಅನೇಕ ನಾಟಕಗಳಲ್ಲಿ ಪಾತ್ರ ನಿರ್ವಹಿಸಿದ ಜಯಲಲಿತಾಗೆ ಚಲನಚಿತ್ರಗಳಲ್ಲಿ ಹೆಚ್ಚಿನ ಅವಕಾಶಗಳು ಬಂದಿದ್ದರಿಂದ ಸಂಧ್ಯಾ ಅವರು ನೃತ್ಯ–ನಾಟಕಕ್ಕಿಂತ ಸಿನಿಮಾ ಕಡೆ ಮುತುವರ್ಜಿ ವಹಿಸಲು ಮಗಳಿಗೆ ಮಾರ್ಗದರ್ಶನ ಕೊಟ್ಟರು. ಐವತ್ತು ವರ್ಷಗಳ ಹಿಂದೆ (1966) ಜಯಲಲಿತಾ ಭಾಗ್ಯದ ಬಾಗಿಲು ತೆರೆಯಿತು. ಆ ಒಂದೇ ವರ್ಷದಲ್ಲಿ ಜಯಲಲಿತಾ ಅಭಿನಯಿಸಿದ ಚಿತ್ರಗಳು ಹನ್ನೊಂದು! ಅವೆಲ್ಲವೂ ಯಶಸ್ಸುಗಳಿಸಿದ ಚಿತ್ರಗಳೇ.

ಪ್ರಾರಂಭದಲ್ಲಿ ಶಿವಾಜಿಗಣೇಶನ್ ಅವರೊಂದಿಗೆ ಮಗಳ ಪಾತ್ರದಲ್ಲಿ ಕಾಣಿಸಿಕೊಂಡ ಜಯಲಲಿತಾ– ಗಲಾಟ ಕಲ್ಯಾಣಂ, ದೈವ ಮಗನ್ ಮೊದಲಾದ 17 ಚಿತ್ರಗಳಲ್ಲಿ ನಾಯಕಿಯಾದರು. ತಮಿಳು ಚಿತ್ರರಂಗದ ಗ್ಲಾಮರಸ್ ನಟಿಯಾಗಿ ಜಯಲಲಿತಾ ಹೊರ ಹೊಮ್ಮಿದ್ದೇ ಅನೇಕ ಹೀರೋಗಳೆಲ್ಲ ಈಕೆಯೊಡನೆ ನಟಿಸತೊಡಗಿದರು. ಅವರಲ್ಲಿ ಜೈಶಂಕರ್, ರವಿಚಂದ್ರನ್, ಮುತ್ತುರಾಮನ್ ಕೂಡಾ ಸೇರಿದ್ದರು.

ಎಂ.ಜಿ.ಆರ್. ಜೊತೆಗೆ ನಾಯಕಿ ಪಯಣ ಸಾಗುತ್ತಲೇ ಇತ್ತು ತಮಿಳಿನಿಂದ ತೆಲುಗು ಚಿತ್ರರಂಗಕ್ಕೂ ಕಾಲಿಟ್ಟರು ಜಯಲಲಿತಾ. ಅಲ್ಲಿಯ ಜನಪ್ರಿಯ ನಟರಾದ ಎನ್.ಟಿ. ರಾಮರಾವ್, ಅಕ್ಕಿನೇನಿ ನಾಗೇಶ್ವರರಾವ್ ಚಿತ್ರಗಳಲ್ಲಿ ನಾಯಕಿಯಾಗಿ ಮಿಂಚಿದರು. ಹಿರಿಯ ನಟರೊಂದಿಗೆ ಸಲೀಸಾಗಿ ಅಭಿನಯಿಸುವುದನ್ನು ಬಹಳ ಬೇಗ ರೂಢಿಸಿಕೊಂಡ ಜಯಲಲಿತಾ, ನಾಗೇಶ್ವರರಾವ್‌ರೊಂದಿಗೆ 'ಮನಸುಲು ಮಮತಲು' ಚಿತ್ರದೊಂದಿಗೆ ತೆಲುಗಿಗೆ ಪ್ರವೇಶಿಸಿದರು. ಎ.ಎನ್.ಆರ್. ಅವರೊಂದಿಗೆ ಏಳು ಚಿತ್ರಗಳಲ್ಲಿ ನಾಯಕಿ. ಎಲ್ಲಾ ಚಿತ್ರಗಳೂ ಹಿಟ್.

ಎನ್.ಟಿ. ರಾಮರಾವ್ ತೆಲುಗು ಚಿತ್ರಭೂಮಿಯ ಇನ್ನೊಬ್ಬ ದಿಗ್ಗಜ. 'ಚಿಕ್ಕಡು ದೊರಕಡು, 'ಆಲಿಬಾಬಾ 40 ದೊಂಗಲು', 'ದೇವುಡು ಚೇಸಿನ ಮನುಷುಲು' ಹೀಗೆ 12 ಚಿತ್ರಗಳಲ್ಲಿ ಎನ್.ಟಿ.ಆರ್.ಗೆ ನಾಯಕಿ. ಒಂದೊಂದು ಚಿತ್ರವೂ ಗಲ್ಲಾಪೆಟ್ಟಿಗೆಯನ್ನು ತುಂಬಿಸಿದವು.

ಡಿ.ಎಂ.ಕೆ. ನಾಯಕರಾಗಿದ್ದ ಎಂ.ಜಿ.ಆರ್ ರಾಜಕೀಯ ಸಭೆ–ಸಮಾರಂಭಗಳಿಗೂ ತಮ್ಮೊಡನೆ ಜಯಲಲಿತಾರನ್ನು ಕರೆದೊಯ್ಯುತ್ತಿದ್ದರು. ರಾಜಕೀಯಕ್ಕೂ ಗ್ಲಾಮರ್ ಸ್ಪರ್ಶ ಇದ್ದೇ ಇತ್ತು. 1965ರ ಕೊನೆಗೆ ಒಂದಾಗಿದ್ದ ಎಂ.ಜಿ.ಆರ್– ಜಯಲಲಿತಾ ಚಿತ್ರ ಜೋಡಿ, 1973ರವರೆಗೆ ಅವ್ಯಾಹತವಾಗಿ ಮುಂದುವರಿಯಿತು. ಈ ಯಾನದಲ್ಲಿ ಅವರಿಬ್ಬರು ಅಭಿನಯಿಸಿದ ಒಟ್ಟು ಚಿತ್ರಗಳು 28. ಎಲ್ಲಾ ಚಿತ್ರಗಳೂ ಹಿಟ್ ಆಗಿದ್ದು ವಿಶೇಷ. ಇವುಗಳಲ್ಲಿ ಕೆಲವು ಹಳೆಯ ದಾಖಲೆಗಳನ್ನೂ ಅಳಿಸಿಹಾಕಿದವು.

ತೆಲುಗು– ತಮಿಳು ಚಿತ್ರಗಳೊಂದಿಗೆ ಹಿಂದಿಗೂ ಕಾಲಿಟ್ಟ ಜಯ, ಕಾಣಿಸಿಕೊಂಡಿದ್ದು 'ಇಜ್ಜತ್' ಸಿನಿಮಾ ಒಂದರಲ್ಲೇ. ಅದರಲ್ಲಿ ಧರ್ಮೇಂದ್ರ ಹೀರೋ. ಇನ್ನೊಂದು ಹಿಂದಿ ಚಿತ್ರದಲ್ಲಿ ನೃತ್ಯ ಪಾತ್ರವನ್ನು ನಿರ್ವಹಿಸಿದ್ದರು. (ಮನ್‌ಮುಜೆ). ಮಲೆಯಾಳಂ ಚಿತ್ರಗಳಲ್ಲೂ ಛಾಪು ಮೂಡಿಸಿದ್ದ ಜಯಾ